# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 351 |
| ಸದಸ್ಯರ ಹೆಸರು | ಶ್ರೀ ಕೆ.ಎಸ್. ನವೀನ್ |
| ಉತ್ತರಿಸುವ ದಿನಾಂಕ | 11.12.2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಮಠಗಳಿವೆ; ಕಳೆದ ಒಂದು ವರ್ಷದಲ್ಲಿ ರಾಜ್ಯ ಸರ್ಕಾರದಿಂದ ರಾಜ್ಯದಲ್ಲಿರುವ ಮಠಗಳಿಗೆ ನೀಡಿರುವ ಅನುದಾನವೆಷ್ಟು; (ಯಾವ ಯಾವ ಮಠಗಳಿಗೆ ಎಷ್ಟು ಅನುದಾನ ನೀಡಲಾಗಿದೆ ಮಠಗಳ ವಿವರ ನೀಡುವುದು) | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 ರ ಕಲಂ 1(4) ರನ್ವಯ ಮಠಗಳು ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ. ಆದ್ದರಿಂದ ಮಠಗಳ ವಿವರಗಳು ಲಭ್ಯವಿರುವುದಿಲ್ಲ.<br><br>ಕಳೆದ ಒಂದು ವರ್ಷದಲ್ಲಿ ರಾಜ್ಯ ಸರ್ಕಾರದಿಂದ ರಾಜ್ಯದಲ್ಲಿರುವ 31 ಜಿಲ್ಲೆಗಳ ಪೈಕಿ ಈ ಕೆಳಕಂಡ 11 ಜಿಲ್ಲೆಗಳಲ್ಲಿ ಒಟ್ಟು 22 ಮಠಗಳಿಗೆ ರೂ. 380.83 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. |

**2023-2024 ಮತ್ತು 2024-25**

| ಕ್ರ. ಸಂ | ಜಿಲ್ಲೆ | 2023-2024 ಸಾಲಿನಲ್ಲಿ ಅನುದಾನ ಮಂಜೂರಾಗಿರುವ ಮಠಗಳ ಸಂಖ್ಯೆ | ಬಿಡುಗಡೆಯಾಗಿರುವ ಅನುದಾನದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಬೆಂಗಳೂರು ನಗರ | 1 | 20.00 |
| 2 | ಬಾಗಲಕೋಟೆ | 1 | 7.50 |
| 3 | ಬೆಳಗಾವಿ | 1 | 12.50 |
| 4 | ಚಾಮರಾಜನಗರ | 1 | 25.00 |
| 5 | ಧಾರವಾಡ | 5 | 45.00 |
| 6 | ದಾವಣಗೆರೆ | 2 | 135.00 |
| 7 | ಹಾವೇರಿ | 1 | 25.00 |
| 8 | ರಾಮನಗರ | 1 | 10.00 |
| 9 | ತುಮಕೂರು | 1 | 20.00 |
| 10 | ಯಾದಗಿರಿ | 6 | 77.50 |
| 11 | ಮೈಸೂರು | 2 | 3.33 |
| | **ಒಟ್ಟು** | **22** | **380.83** |

**ವಿವರ ಅನುಬಂಧದಲ್ಲಿ ಒದಗಿಸಿದೆ.**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ)</td><td>ಸರ್ಕಾರದ ಮುಜರಾಯಿ ಇಲಾಖೆಯು ಬೇರೆ ಬೇರೆ ರಾಜ್ಯಗಳಲ್ಲಿ ಇರುವ ತೀರ್ಥಕ್ಷೇತ್ರಗಳಲ್ಲಿ ಹೊಂದಿರುವ ಭೂಮಿ ಎಷ್ಟು? (ವಿವರ ನೀಡುವುದು)</td><td>ಹೊರ ರಾಜ್ಯಗಳಲ್ಲಿನ ಈ ಕೆಳಕಂಡ ಶ್ರೀಕ್ಷೇತ್ರಗಳಲ್ಲಿ ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖಾ ವತಿಯಿಂದ ನಿರ್ವಹಿಸಲ್ಪಡುತ್ತಿರುವ ಕರ್ನಾಟಕ ರಾಜ್ಯ ಛತ್ರಗಳಿರುತ್ತದೆ.
<table>
<tr><th>ಕ್ರ. ಸಂ</th><th>ರಾಜ್ಯ</th><th>ಕ್ಷೇತ್ರ</th><th>ಭೂಮಿಯ ವಿಸ್ತೀರ್ಣ</th></tr>
<tr><td>(1)</td><td>ಆಂಧ್ರಪ್ರದೇಶ</td><td>ತಿರುಮಲ</td><td>7 ಎಕರೆ 05 ಸೆಂಟ್ಸ್</td></tr>
<tr><td></td><td></td><td>ತಿರುಚಾನೂರು</td><td>14 ಸೆಂಟ್ಸ್</td></tr>
<tr><td></td><td></td><td>ಮಂತ್ರಾಲಯ</td><td>05 ಎಕರೆ</td></tr>
<tr><td></td><td></td><td>ಶ್ರೀಶೈಲಂ</td><td>02 ಎಕರೆ 04 ಸೆಂಟ್ಸ್</td></tr>
<tr><td>(2)</td><td>ಮಹಾರಾಷ್ಟ್ರ</td><td>ತುಳಜಾಪುರ</td><td>4275 ಚ.ಮೀಟರ್</td></tr>
<tr><td></td><td></td><td>ಗುಡ್ಡಾಪುರ</td><td>02 ಎಕರೆ</td></tr>
<tr><td>(3)</td><td>ಉತ್ತರಪ್ರದೇಶ</td><td>ವಾರಣಾಸಿ</td><td>16969.304 ಚ.ಅಡಿ</td></tr>
</table>
ಕೆಳಕಂಡ ಶ್ರೀ ಕ್ಷೇತ್ರಗಳಲ್ಲಿ ಭೂಮಿ ಹೊಂದಿದ್ದು, ಕರ್ನಾಟಕ ರಾಜ್ಯ ಛತ್ರ/ಭವನ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ.
<table>
<tr><th>ಕ್ರ. ಸಂ</th><th>ರಾಜ್ಯ</th><th>ಕ್ಷೇತ್ರ</th><th>ಭೂಮಿಯ ವಿಸ್ತೀರ್ಣ</th></tr>
<tr><td>(1)</td><td>ಆಂಧ್ರಪ್ರದೇಶ</td><td>ತಿರುಪತಿ (ಗಾಂಧಿ ರಸ್ತೆ)</td><td>46 1/2 ಸೆಂಟ್ಸ್</td></tr>
<tr><td>(2)</td><td>ಮಹಾರಾಷ್ಟ್ರ</td><td>ಪಂಡರಾಪುರ</td><td>2000 ಚ.ಮೀ.</td></tr>
</table>
</td></tr>
<tr><td>ಇ)</td><td>ಆ ತೀರ್ಥ ಕ್ಷೇತ್ರಗಳಲ್ಲಿ ಇಲಾಖೆಯಿಂದ ನಿರ್ಮಿಸಿರುವ ಕಟ್ಟಡಗಳಾವುವು; (ವಿವರ ಒದಗಿಸುವುದು)</td><td><u>ತಿರುಮಲ</u>:<br>ತಿರುಮಲದ ಕರ್ನಾಟಕ ರಾಜ್ಯ ಛತ್ರದ ಸ್ಥಳದಲ್ಲಿ ಕರ್ನಾಟಕ ರಾಜ್ಯ ಛತ್ರದ ಸಮಗ್ರ ಅಭಿವೃದ್ಧಿ ಯೋಜನೆಯಡಿ ಕಾಮಗಾರಿಗಗಳ ವಿವರ ಕೆಳಕಂಡಂತಿದೆ.
<ul>
<li><u>ಹಳೇಬೀಡು ಬ್ಲಾಕ್</u>: 74 ಕೊಠಡಿಗಳ ನವೀಕರಣ ಕಾಮಗಾರಿಯು ಮುಕ್ತಾಯವಾಗಿದ್ದು, ಭಕ್ತಾದಿಗಳಿಗೆ ವಸತಿ ಸೌಲಭ್ಯಕ್ಕಾಗಿ ಹಂಚಿಕೆಯಾಗುತ್ತಿರುತ್ತದೆ. (ಕರ್ನಾಟಕ ಪ್ರವಾಸಿ ಸೌಧ ಕಟ್ಟಡ ನವೀಕರಣ)</li>
<li><u>ಹಂಪಿ ಬ್ಲಾಕ್</u>: 110 AC ಕೊಠಡಿಗಳ ಕಾಮಗಾರಿಯು ಮುಕ್ತಾಯಗೊಂಡಿದ್ದು, ಭಕ್ತಾದಿಗಳ ವಸತಿ ಸೌಲಭ್ಯಕ್ಕಾಗಿ ಹಂಚಿಕೆಯಾಗುತ್ತಿರುತ್ತದೆ.</li>
<li><u>ಐಹೊಳೆ ಬ್ಲಾಕ್</u>:132 Non-AC ಕೊಠಡಿಗಳ ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ.</li>
<li><u>ಶ್ರೀ ಕೃಷ್ಣದೇವರಾಯ ಬ್ಲಾಕ್</u> :36 VVIP AC ಕೊಠಡಗಳ_ ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ.</li>
</ul>
</td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಕಳೆದ ಒಂದು ವರ್ಷದಲ್ಲಿ ಹೊರ ರಾಜ್ಯದ ತೀರ್ಥಕ್ಷೇತ್ರಗಳಲ್ಲಿ ಮುಜರಾಯಿ ಇಲಾಖೆ ವತಿಯಿಂದ ಕಟ್ಟಡಗಳ ಅಭಿವೃದ್ಧಿಪಡಿಸಲು ಏನು ಕ್ರಮಕೈಗೊಳ್ಳಲಾಗಿದೆ: ಹೊರ ರಾಜ್ಯದ ತೀರ್ಥಕ್ಷೇತ್ರಗಳಿಗೆ ತೆರಳುವ ರಾಜ್ಯದ ಜನರಿಗೆ ಯಾವ ಯಾವ ವ್ಯವಸ್ಥೆ ಕಲ್ಪಿಸಲಾಗಿದೆ?(ವಿವರ ಒದಗಿಸುವು) | <u>ತಿರುಮಲ</u>:<br>ತಿರುಮಲದ ಕರ್ನಾಟಕ ರಾಜ್ಯ ಛತ್ರದ ಸ್ಥಳದಲ್ಲಿ ಕರ್ನಾಟಕ ರಾಜ್ಯ ಛತ್ರದ ಸಮಗ್ರ ಅಭಿವೃದ್ಧಿ ಯೋಜನೆಯಡಿ ರೂ.200.00ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಕಾಮಗಾರಿಗಳ ವಿವರ ಕೆಳಕಂಡಂತಿರುತ್ತದೆ.<br>• <u>ಹಳೇಬೀಡು ಬ್ಲಾಕ್</u>: 74 ಕೊಠಡಿಗಳ ನವೀಕರಣ ಕಾಮಗಾರಿಯು ಮುಕ್ತಾಯವಾಗಿದ್ದು, ಭಕ್ತಾದಿಗಳಿಗೆ ವಸತಿ ಸೌಲಭ್ಯಕ್ಕಾಗಿ ಹಂಚಿಕೆಯಾಗುತ್ತಿರುತ್ತದೆ. (ಕರ್ನಾಟಕ ಪ್ರವಾಸಿ ಸೌಧ ಕಟ್ಟಡ ನವೀಕರಣ)<br>• <u>ಹಂಪಿ ಬ್ಲಾಕ್</u>: 110 AC ಕೊಠಡಿಗಳ ಕಾಮಗಾರಿಯು ಮುಕ್ತಾಯಗೊಂಡಿದ್ದು, ಭಕ್ತಾದಿಗಳ ವಸತಿ ಸೌಲಭ್ಯಕ್ಕಾಗಿ ಹಂಚಿಕೆಯಾಗುತ್ತಿರುತ್ತದೆ.<br>• <u>ಐಹೊಳೆ ಬ್ಲಾಕ್</u>:132 Non-AC ಕೊಠಡಿಗಳ ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ.<br>• <u>ಶ್ರೀ ಕೃಷ್ಣದೇವರಾಯ ಬ್ಲಾಕ್</u> :36 VVIP AC ಕೊಠಡಗಳ_ ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ.<br>• <u>ಶ್ರೀ ಕೃಷ್ಣ ರಾಜೇಂದ್ರ ಕಲ್ಯಾಣ ಮಂಟಪ</u>: 500 ಆಸನಗಳು ಹಾಗೂ 8 ಕೊಠಡಿಗಳು ಒಳಗೊಂಡಿದ್ದು, ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ.<br><br><u>ಯಾತ್ರಾರ್ಥಿಗಳಿಗೆ ಕಲ್ಪಿಸಲಾಗಿರುವ ಸೌಲಭ್ಯದ ವಿವರ</u>:<br>1. ಛತ್ರದ ಕೊಠಡಿಗಳನ್ನು ಮುಂಗಡವಾಗಿ ಆನ್ ಲೈನ್ ಮತ್ತು ಮೊಬೈಲ್ ಆಪ್ ಮೂಲಕ ಕಾಯ್ದಿರಿಸಿಕೊಳ್ಳಬಹುದು<br>2. ಛತ್ರದಲ್ಲಿ ತಂಗುವ ಯಾತ್ರಾರ್ಥಿಗಳಿಗೆ ಶೌಚಾಲಯ, ಸ್ನಾನದ ಗೃಹ, ಸುದ್ದೀಕರಿಸಿದ ಕುಡಿಯುವ ನೀರು ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.<br><br><u>ಮಂತ್ರಾಲಯ</u>:<br>ಕರ್ನಾಟಕ ರಾಜ್ಯ ಛತ್ರದಲ್ಲಿ ತಂಗುವ ಯಾರ್ತಾರ್ಥಿಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಲಾಗುತ್ತಿದೆ.<br><br><u>ಶ್ರೀಶೈಲಂ</u>:<br><br>ಕರ್ನಾಟಕ ರಾಜ್ಯ ಛತ್ರವು ಶಿಥಿಲಾವಸ್ತೆಯಲ್ಲಿರುವುದನ್ನು ಗಮನಿಸಿ, ಶ್ರೀಶೈಲಂನಲ್ಲಿ ರೂ.85-00 ಕೋಟಿಗಳ ವೆಚ್ಚದಲ್ಲಿ ನೂತನ ವಸತಿ ಸಂಕೀರ್ಣವನ್ನು ನಿರ್ಮಿಸಲು 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಘೋಷಿಸಿದ್ದು ಈ ಉದ್ದೇಶಕ್ಕಾಗಿ ಪ್ರಥಮ ಹಂತದಲ್ಲಿ ರೂ.45-00 ಕೋಟಿಗಳನ್ನು ಮಂಜೂರು ಮಾಡಿದ್ದು ಈವರೆವಿಗೆ ರೂ.33-75 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ಸದರಿ ಅನುದಾನವನ್ನು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | • **ಶ್ರೀ ಕೃಷ್ಣ ರಾಜೇಂದ್ರ ಕಲ್ಯಾಣ ಮಂಟಪ**: 500 ಆಸನಗಳು ಹಾಗೂ 8 ಕೊಠಡಿಗಳು ಒಳಗೊಂಡಿದ್ದು, ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ.<br><br>**ತಿರುಚಾನೂರು**-<br>19 ಕೊಠಗಳು ಹಾಗೂ 02 ಕಲ್ಯಾಣ ಮಂಟಪಗಳಿರುವ ಮೈಸೂರು ಮಹಾರಾಜ ಕಲ್ಯಾಣ ಮಂಟಪವಿರುತ್ತದೆ.<br><br>**ಮಂತ್ರಾಲಯ**:<br><br>ಕರ್ನಾಟಕ ರಾಜ್ಯ ಛತ್ರದಲ್ಲಿ 02 ಕಟ್ಟಡಗಳಿದ್ದು, ಹಳೆಯ ಕಟ್ಟಡದಲ್ಲಿ 52 ಕೊಠಡಿಗಳು ಮತ್ತು 01 ಕಲ್ಯಾಣ ಮಂಟಪವಿರುತ್ತದೆ. ಹೊಸ ಕಟ್ಟಡದಲ್ಲಿ 50 ಕೊಠಡಿಗಳಿರುತ್ತವೆ.<br><br>**ಶ್ರೀಶೈಲಂ**:<br>ಶ್ರೀಶೈಲಂನ ಕರ್ನಾಟಕ ರಾಜ್ಯ ಛತ್ರದಲ್ಲಿ 16 ಕೊಠಡಿಗಳನ್ನೊಳಗೊಂಡಂತೆ ಒಂದು ಕಟ್ಟಡ ಮತ್ತು 8 ಕೊಠಡಿಗಳನ್ನೊಳಗೊಂಡಂತೆ ಒಂದು ಕಟ್ಟಡ ಇರುತ್ತದೆ.<br><br>**ವಾರಣಾಸಿ**:<br>1928 ರಲ್ಲಿ ಅಂದಿನ ಮೈಸೂರು ಮಹಾರಾಜರ ಕಾಲದಲ್ಲಿ 09 ಕೊಠಡಿಗಳನ್ನೊಳಗೊಂಡ ಕಟ್ಟಡ ಹಾಗೂ ತದನಂತರದಲ್ಲಿ ಧಾರ್ಮಿಕ ದತ್ತಿ ಇಲಾಖೆಯಿಂದ 2002ನೇ ಸಾಲಿನಲ್ಲಿ 09 ಕೊಠಡಿಗಳನ್ನೊಳಗೊಂಡ ಮತ್ತೊಂದು ಕಟ್ಟಡವನ್ನು ನಿರ್ಮಿಸಲಾಗಿದೆ.<br><br>**ತುಳಜಾಪುರ**:<br><br>04 ಡಾರ್ಮಿಟರಿ, 02 ಕೊಠಡಿಗಳು, 06 ಶೌಚಾಲಯ, 06 ಸ್ನಾನಗೃಹಗಳನ್ನೊಳಗೊಂಡ ಕರ್ನಾಟಕ ರಾಜ್ಯ ಛತ್ರದ ಕಟ್ಟಡವಿರುತ್ತದೆ.<br><br>**ಗುಡ್ಡಾಪುರ**:.<br><br>ಶ್ರೀ ಕ್ಷೇತ್ರದಲ್ಲಿ ಅನ್ನದಾಸೋಹ ಭವನ ಮತ್ತು ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ. ಯಾತ್ರಾರ್ಥಿಗಳ ಬಳಕೆಗೆ ಒದಗಿಸಲಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಸರ್ಕಾರದ ಆದೇಶ ಸಂಖ್ಯೆ:ಲೋ.ಇ 125 ಬಿಎಂಎಸ್ 2022 ದಿನಾಂಕ: 25.08.2022 ರಲ್ಲಿ ಲೋಕೋಪಯೋಗಿ ಇಲಾಖಾ ವತಿಯಿಂದ ಆಂಧ್ರಪ್ರದೇಶದ ಶ್ರೀಶೈಲಂನಲ್ಲಿ ಯಾತ್ರಿ ನಿವಾಸ ಕಟ್ಟಡ ನಿರ್ಮಾಣ ಕಾಮಗಾರಿಯ ರೂ.85.00 ಕೋಟಿಗಳ ವಿವರವಾದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ 27.12.2023 ರಂದು ಮುಜರಾಯಿ ಮತ್ತು ಸಾರಿಗೆ ಸಚಿವರು ಸ್ಥಳ ಪರಿಶೀಲನೆ ನಡೆಸಿರುತ್ತಾರೆ.<br><br>ಶ್ರೀಶೈಲಂನ ಶ್ರೀ ಭ್ರಮರಾಂಭ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಿಂದ ಗುತ್ತಿಗೆ ಪಡೆದಿರುವ ಸದರಿ ಜಾಗದ ಗುತ್ತಿಗೆ ಅವಧಿಯನ್ನು 1997 ರಿಂದ ಆಂಧ್ರಪ್ರದೇಶ ಸರ್ಕಾರವು ನವೀಕರಿಸಿರುವುದಿಲ್ಲ. ಸದರಿ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸುವ ಕುರಿತು ಉಭಯ ರಾಜ್ಯಗಳ ಮಾನ್ಯ ಸಚಿವರು ಹಾಗೂ ಅಧಿಕಾರಿಗಳು ಸಭೆಯನ್ನು ನಡೆಸಿ ಚರ್ಚಿಸಿ ಜಾಗದ ಗುತ್ತಿಗೆ ಸಮಸ್ಯೆಯನ್ನು ಇತ್ಯರ್ಥ ಪಡಿಸಿದ ಬಳಿಕ ಉದ್ದೇಶಿತ ವಸತಿ ಸಂಕೀರ್ಣವನ್ನು ನಿರ್ಮಿಸಲಾಗುವುದು.<br><br>**<u>ವಾರಣಾಸಿ</u>**:<br>ವಾರಣಾಸಿಯ ಕರ್ನಾಟಕ ರಾಜ್ಯ ಛತ್ರದಲ್ಲಿ ವಾಸ್ತವ್ಯ ಮಾಡುವ ಯಾತ್ರಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ.<br>ಈತನ್ಮಧ್ಯೆ ದಿನಾಂಕ:21.09.2024ರಂದು ಛತ್ರದ ಹಳೆಯ ಕಟ್ಟಡದ ಒಂದು ಭಾಗ ಹಾಗೂ ಕಾಂಪೌಂಡ್ ಕುಸಿದಿದ್ದು, ಹೊಸ ಕಟ್ಟಡ ಭಾಗದ ಅಡಿ ಭಾಗದಲ್ಲಿ ಮಣ್ಣು ಸವಕಳಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ದಿನದಿಂದಲೇ ಯಾತ್ರಾರ್ಥಿಗಳಿಗೆ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿರುವುದಿಲ್ಲ. ಈ ಬಗ್ಗೆ ಮುಜರಾಯಿ ಮತ್ತು ಸಾರಿಗೆ ಸಚಿವರು ದಿನಾಂಕ:16.08.2024 ರಂದು ಸ್ಥಳ ಪರಿಶೀಲನೆ ನಡೆಸಿದ್ದು, ಹೊಸದಾಗಿ ಕಟ್ಟಡ ನಿರ್ಮಿಸಲು ತೀರ್ಮಾನಿಸಿ ಕ್ರಮ ವಹಿಸಲಾಗುತ್ತಿದೆ.<br><br>**<u>ತುಳಜಾಪುರ</u>**:<br>ಕರ್ನಾಟಕ ರಾಜ್ಯ ಛತ್ರದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ.<br><br>**<u>ಗುಡ್ಡಾಪುರ</u>**:.<br>ಕರ್ನಾಟಕ ರಾಜ್ಯ ಛತ್ರದ ಕಟ್ಟಡವು ದಿನಾಂಕ:01.08.2024ರಂದು ಉದ್ಘಾಟನೆಗೊಂಡಿರುತ್ತದೆ. |

ಸಂಖ್ಯೆ: ಕಂಇ 155 ಮುಸಪು 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

## ಅನುಬಂಧ-1

| ಕ್ರ. ಸಂ | ಜಿಲ್ಲೆ | ಮಠಗಳ ಹೆಸರು | ಬಿಡುಗಡೆಯಾಗಿರುವ ಅನುದಾನದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಬೆಂಗಳೂರು ನಗರ | ಶ್ರೀ ಹಠಯೋಗಿ ಕಾಳಪ್ಪ ಸ್ವಾಮಿ ಗದ್ದುಗೆ ಮಂದಿರ, ತಾವರೆಕೆರೆ ಗ್ರಾಮ, ಮಾಗಡಿ ರಸ್ತೆ, ಬೆಂಗಳೂರು ದಕ್ಷಿಣ | 20.00 |
| 2 | ಬಾಗಲಕೋಟೆ | ಶ್ರೀ ಜಗದ್ಗುರು ಗುರುಸಿದ್ದೇಶ್ವರ ಬೃಹನ್ ಮಠ, ಗುಳೆದ ಗುಡ್ಡ ಪಟ್ಟಣ, ಬಾಗಲಕೋಟೆ ಜಿಲ್ಲೆ. | 7.50 |
| 3 | ಬೆಳಗಾವಿ | ಶ್ರೀ ಸಿದ್ದೇಶ್ವರ ದೇವಸ್ಥಾನ, ದ್ವಾರ ಬಾಗಿಲು ಹಣಿಕೆರಿ ತಾಲ್ಲೂಕು, ಬೈಲಹೊಂಗಲ<br>ಬೆಳಗಾವಿ ಜಿಲ್ಲೆ. | 12.50 |
| 4 | ಚಾಮರಾಜನಗರ | ಮಹದೇಶ್ವರ ಬೆಟ್ಟದ ಸಾಲೂರು ಮಠದ ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ | 25.00 |
| 5 | ಧಾರವಾಡ | 1. ಮೃತ್ಯುಂಜಯ ದೇವಾಲಯ, ಮಹಾಮಠ, ಮಣಕವಾಡ ಗ್ರಾಮ, ಅಣ್ಣಿಗೇರಿ ತಾಲ್ಲೂಕು, ಧಾರವಾಡ ಜಿಲ್ಲೆ.<br>2. ಶ್ರೀ ಮಡಿವಾಳೇಶ್ವರ ದೇವಾಲಯ, ತುಪ್ಪದ ಕುರಹಟ್ಟಿ, ಅಣ್ಣಿಗೇರಿ ತಾಲ್ಲೂಕು, ಧಾರವಾಡ ಜಿಲ್ಲೆ.<br>3. ಶ್ರೀ ಚನ್ನವೀರೇಶ್ವರ ಮಠ ಹತ್ತಿರ ಸಮುದಾಯ ಭವನ, ಯಲವದಾಳ ಗ್ರಾಮ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ.<br>4. ಶ್ರೀ ಶಾಂತೇಶ್ವರ ಮಠ ಸೇವಾ ಟ್ರಸ್ಟ್ ಅಮ್ಮಿನಬಾವಿ ಗ್ರಾಮ, ಧಾರವಾಡ ತಾಲ್ಲೂಕು, ಧಾರವಾಡ ಜಿಲ್ಲೆ.<br>5. ಶ್ರೀ ಸದ್ಗುರು ಸಮರ್ಥ ಕಲ್ಮೇಶ್ವರ ಮಹಾರಾಜರ ಸೇವಾ ಸಮಿತಿ, ಹೊಸ ತೇಗೂರ ಗ್ರಾಮ, ಧಾರವಾಡ ತಾಲ್ಲೂಕು, ಧಾರವಾಡ ಜಿಲ್ಲೆ. | 45.00 |
| 6 | ದಾವಣಗೆರೆ | 1. ಶ್ರೀ ಹೆಮ್ಮರೆಡ್ಡಿ ಮಠ, ಹೊಸಹಳ್ಳಿ / ಹರಿಹರ, ದಾವಣಗೆರೆ ಜಿಲ್ಲೆ<br>2. ಶ್ರೀ ರಾಘವೇಂದ್ರ ಮಠ, ಹೊನ್ನಾಳಿ, ದಾವಣಗೆರೆ | 135.00 |
| 7 | ಹಾವೇರಿ | ಶ್ರೀ ದೊಡ್ಡ ಹುಣಸೇ ಕಲ್ಮಠ ಸವಣೂರು ತಾಲ್ಲೂಕು, ಹಾವೇರಿ ಜಿಲ್ಲೆ. | 25.00 |
| 8 | ರಾಮನಗರ | ಶ್ರೀ ಕ್ಷೇತ್ರ ಮರಳಗವಿ ಮಠ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ | 10.00 |
| 9 | ತುಮಕೂರು | ಶ್ರೀ ಕಾಶಿ ಅನ್ನಪೂರ್ಣೇಶ್ವರಿ ಮಹಾಸಂಸ್ಥಾನ ಮಠ, ತಂಗನಹಳ್ಳಿ ಗ್ರಾಮ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ. | 20.00 |
| 10 | ಯಾದಗಿರಿ | 1. ಶ್ರೀ ಮರಳ ಸಿದ್ದೇಶ್ವರ ಮಠ, (ಧರ್ಮದ ಮಠ) ಹೆಗ್ಗಣದೊಡ್ಡಿ ಗ್ರಾಮ, ಸುಪೂರ ತಾಲ್ಲೂಕು, ಯಾದಗಿರಿ<br>2. ಶಹಾಪೂರ ನಗರದ ಶ್ರೀ ಚರಬಸವೇಶ್ವರ ಗದ್ದುಗೆ ಮಠದ ಜೀರ್ಣೋದ್ಧಾರಕ್ಕಾಗಿ.<br>3. ಶಹಾಪೂರ ನಗರದ ಶ್ರೀ ಗುಂಬಳಾಪುರ ಮಠದ ಜೀರ್ಣೋದ್ದಾರಕ್ಕಾಗಿ.<br>4. ಶಹಾಪೂರ ನಗರದ ಶ್ರೀ ಗುರು ಚನ್ನವೀರಭದ್ರಸ್ವಾಮೀಜಿ ವಿದ್ಯಾಪೀಠ ಮಾಗಣಗೇರ ಮಠದ ಜೀರ್ಣೋದ್ದಾರಕ್ಕಾಗಿ.<br>5. ಶಹಾಪೂರ ತಾಲ್ಲೂಕಿನ ನಾಗನಟಗಿ ಗ್ರಾಮದ ಶ್ರೀ ವೀರಭದ್ರೇಶ್ವರ ಮಠದ ಜೀರ್ಣೋದ್ದಾರಕ್ಕಾಗಿ.<br>6. ಕರಡಕಲ್ ಗ್ರಾಮ, ಶ್ರೀ ಕೋರಿ ಸಿದ್ದೇಶ್ವರ ಮಠದ ಜೀರ್ಣೋದ್ದಾರಕ್ಕಾಗಿ | 77.50 |
| 11 | ಮೈಸೂರು | 1. ಗುರುಮಲ್ಲೇಶ್ವರ ಮಠ, ಕಿರಾಳು ಗ್ರಾಮ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.<br>2. ಬೊಮ್ಮಪ್ಪನ ಮಠ, ಅಲಸ್ತಿಕಟ್ಟೆ ಹುಂಡಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ. | 3.33 |
| | | **ಒಟ್ಟು** | **380.83** |